ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೧೭**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೆಂಟನೆಯ ಅಧಿವೇಶನ**
**(ಮುಂದುವರೆದ ಉಪವೇಶನಗಳು)**
**ಶುಕ್ರವಾರ, ದಿನಾಂಕ : ೨೭ನೇ ಮಾರ್ಚ್, ೨೦೨೬**

---

**ಸಮೂಹ – V**

೧. ಸಮಾಜ ಕಲ್ಯಾಣ ಸಚಿವರು

೨. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

೩. ಕೃಷಿ ಸಚಿವರು

೪. ಕಾರ್ಮಿಕ ಸಚಿವರು

೫. ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

೬. ಯೋಜನೆ ಮತ್ತು ಸಾಂಖ್ಯಿಕ ಸಚಿವರು

೭. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು

---

## ಒಳ ಮೀಸಲಾತಿ ಜಾತಿ ಪ್ರಮಾಣ ಪತ್ರ ವಿತರಿಸುವ ಕುರಿತು

**ಶ್ರೀ ಎಫ್.ಹೆಚ್. ಜಕ್ಕಪ್ಪನವರ್ (ನಾಮನಿರ್ದೇಶನ ಹೊಂದಿದವರು) –**

೨೪೧ (೨೪೫೩) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ ೦೧ ಸೇಹಿಮ ೨೦೨೬, ಬೆಂಗಳೂರು ದಿನಾಂಕ : ೨೭.೦೨.೨೦೨೬ರ ಆದೇಶದಲ್ಲಿ ಹಳೇ ಮೀಸಲಾತಿ ಶೇಕಡ ೧೫+೩ರಂತೆ ಮೀಸಲಾತಿ ನೀಡಲು ಆದೇಶ ಹೊರಡಿಸಿರುವುದರಿಂದ ಪರಿಶಿಷ್ಟ ಜಾತಿಯವರಿಗೆ ಸುತ್ತೋಲೆ ಸಂಖ್ಯೆ ಸಕಇ/೦೮/ಎಸೆಲ್ಪಿ/೨೦೨೪ (ಭಾಗ-೫), ದಿನಾಂಕ : ೦೮.೧೦.೨೦೨೫ರ ನಿರ್ದೇಶನದಂತೆ ಜಾತಿ ಪ್ರಮಾಣ ಪತ್ರಗಳನ್ನು ಪ್ರವರ್ಗ-A, B, C ಎಂದು ವರ್ಗೀಕರಿಸಿರುವುದನ್ನು ಹಿಂಪಡೆಯಲು ಕ್ರಮವಹಿಸುತ್ತದೆಯೇ ;

(ಆ) ದಿನಾಂಕ : ೦೮.೧೦.೨೦೨೫ರ ಸುತ್ತೋಲೆಯನ್ನು ಹಿಂಪಡೆದರೆ ಹಿಂದಿನ ಜಾತಿ ಪ್ರಮಾಣ ಪತ್ರವನ್ನೇ ಮರು ಜಾರಿ ಮಾಡಲು ಕ್ರಮವಹಿಸುತ್ತದೆಯೇ ;

(ಇ) ಹಿಂದಿನ ಜಾತಿ ಪ್ರಮಾಣ ಪತ್ರ ಮರು ಜಾರಿ ಮಾಡಲು ಅವಕಾಶವಿಲ್ಲವೆಂದರೆ ಪ್ರವರ್ಗ-A, B, C ಎಂದು ವರ್ಗ ಪ್ರಮಾಣ ಪತ್ರ ನೀಡದೇ ಮೂಲ ಜಾತಿಗಳನ್ನು ನಮೂದಿಸಿ ಜಾತಿ ಪ್ರಮಾಣ ಪತ್ರ ನೀಡಲು ಎಲ್ಲಾ ತಾಲ್ಲೂಕು ತಹಶೀಲ್ದಾರರಿಗೆ ಆದೇಶದ ಮೂಲಕ ನಿರ್ದೇಶನ ನೀಡಲಾಗುವುದೇ ;

(ಈ) ಪ್ರಸ್ತುತ ವಿದ್ಯಾಭ್ಯಾಸಕ್ಕೆ ಹಾಗೂ ಉದ್ಯೋಗಕ್ಕೆ ಅರ್ಜಿ ಸಲ್ಲಿಸಲು ತಕ್ಷಣ ಜಾತಿ ಪ್ರಮಾಣ ಪತ್ರ ಪಡೆಯಲು ಸಾಧ್ಯವಾಗದವರು ಹಳೆ ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸಿ ಮುಂದೆ ಪರಿಶೀಲನಾ ಸಂದರ್ಭದಲ್ಲಿ ಹೊಸ ಜಾತಿ ಪ್ರಮಾಣ ಪತ್ರಗಳನ್ನು ಸಲ್ಲಿಸಲು ಅವಕಾಶವಿದೆಯೇ ; ಈ ಬಗ್ಗೆ ಸರ್ಕಾರದ ಕ್ರಮವೇನು ?

## ಅಂಗನವಾಡಿ ನೌಕರರ ಪ್ರತಿಭಟನೆ ಕುರಿತು

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) –**

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೪೨ (೨೪೨೦+೨೪೦೪) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಂಗನವಾಡಿ ನೌಕರರು ತಮ್ಮ ತಿಂಗಳ ಗೌರವಧನವನ್ನು ರೂ.೧೫ ಸಾವಿರಕ್ಕೆ ಹೆಚ್ಚಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಇತ್ತೀಚೆಗೆ ಬೃಹತ್ ಪ್ರತಿಭಟನೆ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ರಾಜ್ಯದಲ್ಲಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಸಂಖ್ಯೆ ಎಷ್ಟು ; ಪ್ರಸ್ತುತ ಅವರಿಗೆ ನೀಡುತ್ತಿರುವ ಗೌರವಧನದ ಮತ್ತು ಇತರೆ ಎಲ್ಲಾ ಸೌಲಭ್ಯಗಳ ವಿವರಗಳೇನು ;

(ಇ) ಅಂಗನವಾಡಿ ನೌಕರರುಗಳ ತಿಂಗಳ ಗೌರವಧನವನ್ನು ಗಣನೀಯವಾಗಿ ಹೆಚ್ಚಿಸುವುದು, ನಿವೃತ್ತಿ ಪರಿಹಾರ ಧನವನ್ನು ಹೆಚ್ಚಿಸುವುದು ಸೇರಿದಂತೆ ನಿವೃತ್ತರಿಗೆ ಸುಪ್ರೀಂಕೋರ್ಟ್ ಆದೇಶದಂತೆ ಗ್ರ್ಯಾಚ್ಯುಟಿ (ಉಪಧನ) ಹಣವನ್ನು ನೀಡುವ ಕುರಿತು ಸರ್ಕಾರ ಇದುವರೆಗೆ ಯಾವುದೇ ಕ್ರಮವಹಿಸದೆ ದೀರ್ಘಕಾಲದಿಂದ ನಿರ್ಲಕ್ಷ್ಯ ತೋರುತ್ತಿರಲು ಕಾರಣಗಳೇನು ;

(ಈ) ಸರ್ಕಾರದ ಯೋಜನೆಗಳನ್ನು ಬೇರುಮಟ್ಟದಲ್ಲಿ ಜನರಿಗೆ ತಲುಪಿಸುವ ಗುರುತರ ಹೊಣೆಯನ್ನು ಹೊತ್ತಿರುವ ಅಂಗನವಾಡಿ ಕಾರ್ಯಕರ್ತೆಯರು

ಹಾಗೂ ಸಹಾಯಕಿಯರ ಗೌರವಧನವನ್ನು ಗಣನೀಯವಾಗಿ ಹೆಚ್ಚಿಸುವುದರ ಜೊತೆಗೆ ನಿವೃತ್ತರಿಗೆ ಸುಪ್ರೀಂಕೋರ್ಟ್ ಆದೇಶದಂತೆ ಗ್ರ್ಯಾಚ್ಯುಟಿ (ಉಪಧನ) ಹಣವನ್ನು ನೀಡಲು ಯಾವ ಕಾಲಮಿತಿಯೊಳಗೆ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳುವುದು ?

## ರಾಯಚೂರು ಜಿಲ್ಲೆ ಸಿರವಾರ ಪಟ್ಟಣದಲ್ಲಿ ನಡೆಯುತ್ತಿರುವ ಹಾಸ್ಟೆಲ್ ಕಾಮಗಾರಿ ಕುರಿತು

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) –**

೨೪೩ (೨೩೨೯) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಜಿಲ್ಲೆ ಸಿರವಾರ ಪಟ್ಟಣದಲ್ಲಿ ತಮ್ಮ ಇಲಾಖೆಯಿಂದ ಮಂಜೂರಾದ ಮೆಟ್ರಿಕ್ ನಂತರ ವಸತಿ ನಿಲಯ ಕಟ್ಟಡ ಕಾಮಗಾರಿಯನ್ನು ಯಾವ ಯೋಜನೆಯಲ್ಲಿ ಕೈಗೊಳ್ಳಲಾಗುತ್ತಿದೆ ; ಸದರಿ ಕಾಮಗಾರಿಯ ಅಂದಾಜು ಪ್ರತಿ ನೀಡುವುದು ;

(ಆ) ಸದರಿ ಕಾಮಗಾರಿಯನ್ನು ಇಲಾಖೆಯ ಸ್ವಂತ ಜಾಗದಲ್ಲಿ ನಡೆಯುತ್ತಿದೆಯೇ ಅಥವಾ ಬೇರೆ ಕಡೆ ನಡೆಯುತ್ತಿದೆಯೇ ; ಬೇರೆ ಕಡೆ ನಡೆದಲ್ಲಿ, ಕಾಮಗಾರಿ ಕೈಗೊಳ್ಳಲು ನಿವೇಶನದ ಮಾಲೀಕ/ಇಲಾಖೆಯು ಅನುಮತಿ ಪಡೆಯಲಾಗಿದೆಯೇ ; ಅನುಮತಿ ಪಡೆದಿದ್ದಲ್ಲಿ, ಅದರ ಪ್ರತಿ ನೀಡುವುದು ;

(ಇ) ಈ ಕಾಮಗಾರಿಯನ್ನು ಸರ್ಕಾರ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ನಿರ್ಮಿಸಿದರೆ ಆಟದ ಮೈದಾನ ಇಲ್ಲದಂತಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಿಲ್ಲವೇ ; ಕಾಮಗಾರಿಯನ್ನು ಸದರಿ ಸ್ಥಳದಲ್ಲಿ ನಡೆಯುವುದನ್ನು ಸಾರ್ವಜನಿಕರು ವಿರೋಧಿಸಿದರೂ ಸಹ ಅಲ್ಲಿಯೇ ನಡೆಸಲು ಕಾರಣಗಳೇನು ;

(ಈ) ವಿದ್ಯಾರ್ಥಿ ನಿಲಯ ನಿರ್ಮಿಸಲು ಪಟ್ಟಣದಲ್ಲಿ ನೂರಾರು ಸಂಖ್ಯೆಯ CA Site ಗಳು ಲಭ್ಯವಿದ್ದು, ಅಲ್ಲಿ ನಿರ್ಮಿಸಲು ಇರುವ ತೊಂದರೆಗಳೇನು ?

## ಗ್ರಾಮ ಪಂಚಾಯಿತಿಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸುವ ಕುರಿತು

**ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೨೪೪ (೨೩೬೯) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ವ್ಯಾಪ್ತಿಯಲ್ಲಿ ಕೆಲವು ಗ್ರಾಮ ಪಂಚಾಯಿತಿಗಳಿಗೆ ಸ್ವಂತ ಕಟ್ಟಡಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ನಿರ್ಮಾಣ ಮಾಡಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ ;

(ಆ) ಸದರಿ ಗ್ರಾಮ ಪಂಚಾಯಿತಿಗಳಲ್ಲಿ ಸಿಬ್ಬಂದಿಗಳ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇವುಗಳ ಭರ್ತಿಗೆ ಸರ್ಕಾರ ಕೈಗೊಂಡ ಕ್ರಮವೇನು ;

(ಇ) ಸದರಿ ಗ್ರಾಮ ಪಂಚಾಯಿತಿಗಳ ಸದಸ್ಯರ ಅವಧಿ ಮುಕ್ತಾಯವಾಗಿದ್ದು, ಮುಂದಿನ ಅವಧಿಗೆ ಚುನಾವಣೆಗಳನ್ನು ನಡೆಸಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ ?

## ಅಂಗನವಾಡಿಗಳಲ್ಲಿ ಬ್ಯಾನರ್ ಅಳವಡಿಸುವ ಕುರಿತು

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) –**

೨೪೫ (೨೩೭೦) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಯೋಜನೆಯಡಿ ಬರುವ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು (ICDS) ೫೦ ವರ್ಷಗಳನ್ನು ಪೂರೈಸಿದ ಸುವರ್ಣ ಮಹೋತ್ಸವದ ಅಂಗವಾಗಿ, ಯೋಜನೆಯ ಉದ್ದೇಶ ಮತ್ತು ಗುರಿಗಳನ್ನು ಸಾರ್ವಜನಿಕರಿಗೆ ಪ್ರಚುರಪಡಿಸಲು ರಾಜ್ಯದಾದ್ಯಂತ ಎಲ್ಲಾ ಅಂಗನವಾಡಿ ಕೇಂದ್ರಗಳ ಮುಂದೆ ಬ್ಯಾನರ್ (ನಾಮಫಲಕ) ಅಳವಡಿಸಲು ಸರ್ಕಾರ ತೀರ್ಮಾನಿಸಿದೆಯೇ ;

(ಆ) ಹಾಗಿದ್ದಲ್ಲಿ, ಸದರಿ ಬ್ಯಾನರ್‌ಗಳ ಮುದ್ರಣಕ್ಕಾಗಿ ಏಜೆನ್ಸಿಯನ್ನು (ಸಂಸ್ಥೆಯನ್ನು) ಆಯ್ಕೆ ಮಾಡುವಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯಡಿ ಅಳವಡಿಸಿಕೊಂಡಿರುವ ಮಾನದಂಡಗಳೇನು ; (ಸಂಪೂರ್ಣ ವಿವರ ನೀಡುವುದು) ಆಯ್ಕೆಯಾದ ಏಜೆನ್ಸಿಗೆ ಕಾರ್ಯಾದೇಶವನ್ನು (Work order) ಯಾವ ಆಧಾರದ ಮೇಲೆ ಮತ್ತು ಯಾವ ಪ್ರಕ್ರಿಯೆಯ ಮೂಲಕ ನೀಡಲಾಗಿದೆ ; ಟೆಂಡರ್ ಕರೆಯಲಾಗಿದೆಯೇ ಅಥವಾ ವಿನಾಯಿತಿ ನೀಡಲಾಗಿದೆಯೇ ; (ವಿವರ ನೀಡುವುದು)

(ಇ) ಈ ಯೋಜನೆಗಾಗಿ ರಾಜ್ಯಾದ್ಯಂತ ಮುದ್ರಿಸಲಾಗಿರುವ ಒಟ್ಟು ಬ್ಯಾನರ್‌ಗಳ ಸಂಖ್ಯೆ ಎಷ್ಟು ಮತ್ತು ಪ್ರತಿ ಬ್ಯಾನರ್‌ನ (Per unit cost) ಮುದ್ರಣ ವೆಚ್ಚವೆಷ್ಟು ; ಈ ಮೇಲ್ಕಂಡ ಕಾರ್ಯಕ್ಕೆ ಸಂಬಂಧಿಸಿದಂತೆ ಮುದ್ರಿಸಲಾದ ಬ್ಯಾನರ್‌ಗಳ ಒಟ್ಟು ಸಂಖ್ಯೆ ಮತ್ತು ಪ್ರತಿ ಯೂನಿಟ್ ವೆಚ್ಚದ ಜಿಲ್ಲಾವಾರು

ಸಂಪೂರ್ಣ ಮಾಹಿತಿ ಒದಗಿಸುವುದು ; ಬೆಂಗಳೂರು ನಗರದ ಝೇಂಕಾರ್ ಜಾಹೀರಾತು ಏಜೆನ್ಸಿರವರಿಗೆ ಎಷ್ಟು ಮೊತ್ತದ ಎಷ್ಟು ಬ್ಯಾನರ್‌ಗಳನ್ನು ಮುದ್ರಿಸಲು ಆದೇಶ ನೀಡಿದೆ ; ೪ಜಿ ವಿನಾಯಿತಿ ನೀಡಲಾಗಿದೆಯೇ ; (ಮಾಹಿತಿ ನೀಡುವುದು)

(ಈ) ಬ್ಯಾನರ್‌ಗಳ ಮುದ್ರಣಕ್ಕಾಗಿ ಯಾವ ದಿನಾಂಕದಂದು ಬಿಲ್ ಪಾವತಿ ಮಾಡಲಾಗಿದೆ ಮತ್ತು ಯಾರಿಗೆ ಮಾಡಲಾಗಿದೆ ; ಬಿಲ್ ಸಂಖ್ಯೆ, ಚೆಕ್ ಸಂಖ್ಯೆ, ಪಾವತಿ ಮಾಡಿರುವ ಬ್ಯಾಂಕ್ ವಿವರಗಳೊಂದಿಗೆ ಮಾಹಿತಿ ನೀಡುವುದು ?

## ಕೊಡಗು ಜಿಲ್ಲೆಯಲ್ಲಿ ಖಾಲಿ ಇರುವ ಪಂಚಾಯಿತಿ ಅಧಿಕಾರಿ ಹುದ್ದೆಗಳ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೪೬ (೧೨೫೪) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯಲ್ಲಿರುವ ಗ್ರಾಮ ಪಂಚಾಯತಿಗಳ ಸಂಖ್ಯೆ ಎಷ್ಟು ; ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪಿ.ಡಿ.ಓ. ಗಳ ಸಂಖ್ಯೆ ಎಷ್ಟು ;

(ಆ) ಇಲಾಖೆಯಲ್ಲಿ ಮಂಜೂರಾಗಿರುವ ಹಾಗೂ ಖಾಲಿಯಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯತ್ ಕಾರ್ಯದರ್ಶಿಗಳ ಹುದ್ದೆಗಳ ಸಂಖ್ಯೆ ಎಷ್ಟು ; ಯಾವ ಕಾಲಮಿತಿಯಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುವುದು ; (ವಿವರ ನೀಡುವುದು)

(ಇ) ಕೊಡಗು ಜಿಲ್ಲೆ ಒಳಗೊಂಡಂತೆ ರಾಜ್ಯದ ಅನೇಕ ಗ್ರಾಮ ಪಂಚಾಯತ್‌ಗಳಲ್ಲಿ ಪಿ.ಡಿ.ಓ. ಗಳಿಗೆ ಒಂದಕ್ಕಿಂತ ಹೆಚ್ಚಿನ ಪಂಚಾಯತಿಗಳ ಜವಾಬ್ದಾರಿಯನ್ನು ವಹಿಸಲು ಕಾರಣಗಳೇನು ;

(ಈ) ಕೊಡಗು ಜಿಲ್ಲೆಯಲ್ಲಿ ಒಂದಕ್ಕಿಂತ ಹೆಚ್ಚು ಗ್ರಾಮ ಪಂಚಾಯತಿಗಳಲ್ಲಿ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ ಪಿ.ಡಿ.ಓ. ಗಳ ಸಂಖ್ಯೆ ಎಷ್ಟು ?

## ರಾಜ್ಯದಲ್ಲಿ ತೃತೀಯ ಲಿಂಗಿಗಳ ಪುನಃಶ್ಚೇತನ ಮತ್ತು ಮಹಿಳಾ ಹಾಗೂ ಮಕ್ಕಳ ಭಿಕ್ಷಾಟನೆ ತಡೆಗಟ್ಟುವ ಬಗ್ಗೆ

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶನ ಹೊಂದಿದವರು) –**

೨೪೭ (೨೪೫೭) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ತೃತೀಯ ಲಿಂಗಿಗಳ (Transgenders) ಒಟ್ಟು ಸಂಖ್ಯೆ ಎಷ್ಟು ; ಹೊರ ರಾಜ್ಯಗಳಿಂದ ತೃತೀಯ ಲಿಂಗಿಗಳು ಬಂದು ಇಲ್ಲಿ ನೆಲೆಸುವುದರಿಂದ ಆಗುತ್ತಿರುವ ಸಾಮಾಜಿಕ ಸ್ಥಿತ್ಯಂತರಗಳನ್ನು ತಡೆಯಲು ಸರ್ಕಾರವು ಯಾವುದಾದರೂ ನಿರ್ದಿಷ್ಟ ಕ್ರಮಗಳನ್ನು ಕೈಗೊಂಡಿದೆಯೇ ;

(ಆ) ರಾಜ್ಯದಲ್ಲಿರುವ ತೃತೀಯ ಲಿಂಗಿಗಳ ಭಿಕ್ಷಾಟನೆ ಮತ್ತು ಅನೈತಿಕ ಚಟುವಟಿಕೆಗಳಲ್ಲಿ ತೊಡಗದಂತೆ ತಡೆಯಲು ಸರ್ಕಾರ ರೂಪಿಸಿರುವ ಪುನಃಶ್ಚೇತನ ಕಾರ್ಯಕ್ರಮಗಳು (Rehabilitation Programs) ಯಾವುವು ; ಅವರಿಗೆ ಗೌರವಯುತ ಜೀವನ ನಡೆಸಲು ಉದ್ಯೋಗಾವಕಾಶ ಅಥವಾ ಸ್ವಯಂ ಉದ್ಯೋಗಕ್ಕೆ ನೀಡುತ್ತಿರುವ ಪ್ರೋತ್ಸಾಹ ಧನ ಎಷ್ಟು ; (ಸಂಪೂರ್ಣ ವಿವರ ನೀಡುವುದು)

(ಇ) ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರು ಎಳೆಯ ಮಕ್ಕಳನ್ನು ಬಳಸಿಕೊಂಡು ಭಿಕ್ಷಾಟನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದನ್ನು ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳೇನು ; ಇಂತಹ ಮಹಿಳೆಯರು ಮತ್ತು ಮಕ್ಕಳನ್ನು ನಿರಾಶ್ರಿತರ ಪರಿಹಾರ ಕೇಂದ್ರಗಳಿಗೆ (Beggar's Relief Centres) ದಾಖಲಿಸಲಾಗಿದೆಯೇ ; ಮಹಿಳೆಯರಿಗಾಗಿ ರಾಜ್ಯದಲ್ಲಿ ಪ್ರತ್ಯೇಕ ನಿರಾಶ್ರಿತರ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆಯೇ ;

(ಈ) ಸಾರ್ವಜನಿಕರಿಂದ ಸಂಗ್ರಹಿಸಲಾಗುತ್ತಿರುವ 'ಭಿಕ್ಷುಕರ ಉಪಕರ'ದ (Beggars Cess) ಒಟ್ಟು ಮೊತ್ತ ಎಷ್ಟು ; ಈ ಮಹಿಳೆಯರು, ಮಕ್ಕಳು ಮತ್ತು ತೃತೀಯ ಲಿಂಗಿಗಳ ಕಲ್ಯಾಣಕ್ಕಾಗಿ ಈವರೆಗೆ ಎಷ್ಟು ಮೊತ್ತವನ್ನು ವಿನಿಯೋಗಿಸಲಾಗಿದೆ ; (ವರ್ಷವಾರು ಮಾಹಿತಿ ಒದಗಿಸುವುದು)

(ಉ) ರಾಜ್ಯದಲ್ಲಿ ಪ್ರಸ್ತುತ ಎಷ್ಟು ಪುನರ್ವಸತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಮತ್ತು ಎಷ್ಟು ಜನರು ಈ ಕೇಂದ್ರಗಳ ಪ್ರಯೋಜನ ಪಡೆಯುತ್ತಿದ್ದಾರೆ ? (ಜಿಲ್ಲಾವಾರು ಕೇಂದ್ರಗಳ ಸಂಖ್ಯೆ ಮತ್ತು ಫಲಾನುಭವಿಗಳ ವಿವರ ನೀಡುವುದು)

## ಗ್ರಾಮ ಪಂಚಾಯತಿ ಗ್ರಂಥಪಾಲಕರ ಕನಿಷ್ಠ ವೇತನ ಮತ್ತು ಬಾಕಿ ವೇತನ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೪೮ (೨೪೦೨) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಗ್ರಾಮ ಪಂಚಾಯಿತಿಗಳ ಅಧೀನದಲ್ಲಿರುವ ಗ್ರಾಮ ಗ್ರಂಥಾಲಯಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಗ್ರಂಥಪಾಲಕರ ಒಟ್ಟು ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಗ್ರಾಮ ಗ್ರಂಥಾಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ಗ್ರಂಥಪಾಲಕರಿಗೆ ರಾಜ್ಯ ಸರ್ಕಾರ ಹೊರಡಿಸಿರುವ ಅಧಿಸೂಚನೆಯ ಪ್ರಕಾರ ನಿಗದಿಪಡಿಸಿದ ಕನಿಷ್ಟ ವೇತನವನ್ನು ನೀಡಲಾಗುತ್ತಿಲ್ಲ ಎಂಬ ದೂರುಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಆ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳ ವಿವರ ಹಾಗೂ ಬಾಕಿ ವೇತನ ಪಾವತಿಗೆ ಕೈಗೊಂಡಿರುವ ಕ್ರಮಗಳ ವಿವರ ನೀಡುವುದು ;

(ಇ) ಗ್ರಾಮ ಗ್ರಂಥಾಲಯಗಳಲ್ಲಿ ಕೆಲಸ ಮಾಡುತ್ತಿರುವ ಗ್ರಂಥಪಾಲಕರ ಸೇವೆಯನ್ನು ನಿಯಮಿತಗೊಳಿಸುವುದು ಅಥವಾ ಶಾಶ್ವತ ನೇಮಕಾತಿ ನೀಡುವ ಕುರಿತು ಸರ್ಕಾರದ ಪರಿಗಣನೆಯಲ್ಲಿದೆಯೇ ; ಇದ್ದರೆ, ಅದರ ವಿವರ ಹಾಗೂ ಕೈಗೊಳ್ಳಲಾಗಿರುವ ಕ್ರಮಗಳೇನು ; (ಮಾಹಿತಿ ನೀಡುವುದು)

(ಈ) ಗ್ರಾಮ ಗ್ರಂಥಾಲಯಗಳಲ್ಲಿ ವ್ಯಾಪ್ತಿಯ ಗ್ರಂಥಪಾಲಕರಿಗೆ ನಿಗದಿತ ವೇತನ ಪಾವತಿ ಕಡಿಮೆಯಾಗಲು ಆಡಳಿತಾತ್ಮಕ ದೋಷಗಳು, ಅನುದಾನ ಬಿಡುಗಡೆ ವಿಳಂಬ, ಅಥವಾ ವರ್ಗೀಕರಣ ಸಂಬಂಧಿತ ಸಮಸ್ಯೆಗಳು ಕಾರಣವಾಗಿವೆಯೇ ; ಇದ್ದರೆ, ಅದರ ಕುರಿತು ಸಂಪೂರ್ಣ ವಿವರವನ್ನು ನೀಡುವುದು ;

(ಉ) ಈ ರೀತಿಯ ವೇತನ ಪಾವತಿ ಸಮಸ್ಯೆಗಳು ಉಂಟಾಗದಂತೆ ಮಾಡಲು ಸರ್ಕಾರವು ಸಂಬಂಧಿತ ಗ್ರಾಮ ಪಂಚಾಯಿತಿಗಳಿಗೆ ಯಾವುದೇ ಸ್ಪಷ್ಟ ಮಾರ್ಗಸೂಚಿಗಳು ಅಥವಾ ತಿದ್ದುಪಡಿ ಆದೇಶಗಳನ್ನು ನೀಡಿದೆಯೇ ; ನೀಡಿದ್ದರೆ, ಅದರ ವಿವರಗಳನ್ನು ನೀಡುವುದು ;

(ಊ) ಗ್ರಾಮ ಗ್ರಂಥಾಲಯಗಳ ಗ್ರಂಥಪಾಲಕರಿಗೆ ವೇತನ ಪಾವತಿಯಲ್ಲಿ ಬಾಕಿ ಇರುವ ವೇತನ (ಅರಿಯರ್ಸ್)ವನ್ನು ಯಾವ ದಿನಾಂಕದೊಳಗೆ ಪಾವತಿಸಲಾಗುವುದು ; (ವಿವರ ನೀಡುವುದು)

(ಋ) ಇಂತಹ ವೇತನ ವ್ಯತ್ಯಾಸ ಮತ್ತು ಬಾಕಿ ಪಾವತಿ ಸಮಸ್ಯೆಗಳು ಭವಿಷ್ಯದಲ್ಲಿ ಉಂಟಾಗದಂತೆ ಮಾಡಲು ಸರ್ಕಾರವು ಸಂಬಂಧಿತ ಗ್ರಾಮ ಪಂಚಾಯಿತಿಗಳಿಗೆ ಯಾವುದೇ ಸ್ಪಷ್ಟ ಮಾರ್ಗಸೂಚಿ ಅಥವಾ ಮೇಲ್ವಿಚಾರಣಾ ವ್ಯವಸ್ಥೆಯನ್ನು ರೂಪಿಸುವ ಉದ್ದೇಶ ಹೊಂದಿದೆಯೇ ? (ಇದ್ದರೆ, ಅದರ ವಿವರಗಳನ್ನು ನೀಡುವುದು)

## ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಬಜೆಟ್ ಮತ್ತು ಆಡಳಿತದ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೨೪೯ (೨೪೦೮) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವಾರ್ಷಿಕ ಬಜೆಟ್ ಎಷ್ಟು ; ಕಳೆದ ವರ್ಷಕ್ಕಿಂತ ಪ್ರಸ್ತುತ ಎಷ್ಟು ಹೆಚ್ಚಳ/ಕಡಿತವಾಗಿದೆ ;

(ಆ) ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿ ಹುದ್ದೆಗಳ ಸಂಖ್ಯೆ ಎಷ್ಟು ; ಅವುಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳಾವುವು ;

(ಇ) ಯೋಜನೆಗಳ ಮೇಲ್ವಿಚಾರಣೆಗಾಗಿ ಡಿಜಿಟಲ್ ವ್ಯವಸ್ಥೆ ಜಾರಿಗೆ ತರಲಾಗಿದೆಯೇ ; ಇದ್ದಲ್ಲಿ, ಮಾಹಿತಿ ಒದಗಿಸುವುದು ;

(ಈ) ಮಹಿಳಾ ಸ್ವಸಹಾಯ ಸಂಘಗಳಿಗೆ ನೀಡಲಾಗುತ್ತಿರುವ ಸಾಲ ಹಾಗೂ ಸಬ್ಸಿಡಿ ವಿವರವೇನು ;

(ಉ) ಉದ್ಯೋಗಾವಕಾಶಗಳಿಗಾಗಿ ಮಹಿಳೆಯರಿಗೆ ನೀಡಲಾಗುತ್ತಿರುವ ತರಬೇತಿ ಕಾರ್ಯಕ್ರಮಗಳು ಯಾವುವು ?

## ಗ್ರಾಮ ಪಂಚಾಯತ್ ನೌಕರರ ನೇಮಕಾತಿ ಕುರಿತು

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ ) –**

೨೫೦ (೨೪೩೨) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ರಾಜ್ಯದ ಗ್ರಾಮ ಪಂಚಾಯತಿಗಳಲ್ಲಿ ನಿವೃತ್ತರಾದ, ಪದೋನ್ನತಿ ಹೊಂದಿದ ಗ್ರಾಮ ಪಂಚಾಯತ್ ನೌಕರರ ಸಂಖ್ಯೆ ಎಷ್ಟು ; (ಜಿಲ್ಲಾವಾರು, ವರ್ಷವಾರು ವಿವರ ನೀಡುವುದು)

(ಆ) ಕಳೆದ ೩ ವರ್ಷಗಳಲ್ಲಿ ನೇಮಕ ಮಾಡಿಕೊಳ್ಳಲಾದ ಗ್ರಾಮ ಪಂಚಾಯತ್ ನೌಕರರ ಸಂಖ್ಯೆ ಎಷ್ಟು ; (ಜಿಲ್ಲಾವಾರು, ವರ್ಷವಾರು ವಿವರ ನೀಡುವುದು)

(ಇ) ಪ್ರಸ್ತುತ ಖಾಲಿಯಿರುವ ಗ್ರಾಮ ಪಂಚಾಯತ್ ನೌಕರರ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಈ) ಹಲವು ವರ್ಷಗಳಿಂದ ಗ್ರಾಮ ಪಂಚಾಯತ್ ನೌಕರರನ್ನು ನೇಮಕ ಮಾಡಿಕೊಳ್ಳದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ನೇಮಕ ಮಾಡಿಕೊಳ್ಳದಿರಲು ಕಾರಣಗಳೇನು ;

(ಉ) ಗ್ರಾಮ ಪಂಚಾಯತ್ ನೌಕರರ ಹುದ್ದೆ ಖಾಲಿಯಿರುವುದು ಸಾರ್ವಜನಿಕರಿಗೆ ಸಕಾಲದಲ್ಲಿ ಸೇವೆ ಸಿಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇವರ ನೇಮಕಾತಿಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು ; ಯಾವ ಕಾಲಮಿತಿಯಲ್ಲಿ ನೇಮಕಾತಿ ಮಾಡಲಾಗುವುದು ?

# ರಾಜ್ಯದ ಗ್ರಾಮೀಣ ಭಾಗದ ರೈತರು ಹಾಗೂ ಸಾರ್ವಜನಿಕರ ಆಸ್ತಿ ದಾಖಲೆಗಳನ್ನು ಪಾರದರ್ಶಕ ಮತ್ತು ಡಿಜಿಟಲ್ ರೂಪದಲ್ಲಿ ಅಳವಡಿಸುವ ಬಗ್ಗೆ

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ ) –**

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ ) –**

೨೫೧ (೨೩೫೧+೨೪೩೩+೨೩೯೮) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೪ರಿಂದ ಇಲ್ಲಿಯವರೆಗೆ ರಾಜ್ಯದ ಗ್ರಾಮೀಣ ಭಾಗದ ಸಾರ್ವಜನಿಕರು ತಮ್ಮ ಆಸ್ತಿ ದಾಖಲೆಗಳನ್ನು ಪಾರದರ್ಶಕ ಮತ್ತು ಡಿಜಿಟಲ್ ರೂಪದಲ್ಲಿ ಪಡೆಯಲು ಮತ್ತು ಸಾರ್ವಜನಿಕರ ಆಸ್ತಿ ಭದ್ರತೆ ಮತ್ತು ಸ್ವತ್ತು ರಕ್ಷಣೆಯ ಉದ್ದೇಶದೊಂದಿಗೆ ಸರ್ಕಾರವು ಇ–ಸ್ವತ್ತು ೨.೦ ತಂತ್ರಾಂಶವನ್ನು ದಿನಾಂಕ : ೨೯.೧೧.೨೦೨೫ರ ಆದೇಶದಂತೆ ದಿನಾಂಕ : ೦೧.೧೨.೨೦೨೫ ರಿಂದ ಜಾರಿಗೆ ತರಲು ಆದೇಶಿಸಿದ್ದು, ಆದರೆ ಗ್ರಾಮೀಣ ಭಾಗದ ರೈತರು ತಮ್ಮ ಆಸ್ತಿಗಳ ಮೇಲೆ ಬ್ಯಾಂಕಿನಿಂದ ಸಾಲ ಪಡೆಯಲು ಮತ್ತು ಆಸ್ತಿ ಪರಭಾರೆ ಮಾಡಲು ಇ–ಸ್ವತ್ತು ದಾಖಲೆ ದೊರೆಯದೆ ಪರದಾಡುತ್ತಿರುವ ಪರಿಸ್ಥಿತಿಯು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ರಾಜ್ಯದಲ್ಲಿನ ಗ್ರಾಮೀಣ ಭಾಗದಲ್ಲಿ ಈವರೆಗೆ ಇ–ಸ್ವತ್ತು ೨.೦ ತಂತ್ರಾಂಶದಡಿ ದಾಖಲೆಗಳನ್ನು ಪಡೆಯಲು ಸಾರ್ವಜನಿಕರಿಂದ ಸ್ವೀಕೃತವಾದ ಅರ್ಜಿಗಳ ಸಂಖ್ಯೆ ಎಷ್ಟು ; ವಿಲೇವಾರಿಯಾದ ಅರ್ಜಿಗಳ ಸಂಖ್ಯೆ ಎಷ್ಟು ; ಗ್ರಾಮ ಪಂಚಾಯತ್ ಕಾರ್ಯದರ್ಶಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್ ಅಧ್ಯಕ್ಷರು/ಗ್ರಾಮ ಪಂಚಾಯತ್ ಆಡಳಿತಾಧಿಕಾರಿಗಳ ಹಾಗೂ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ಲಾಗಿನ್‌ನಲ್ಲಿ ಅನುಮೋದನೆಗಾಗಿ ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು ; ಜಿಲ್ಲಾವಾರು ಮಾಹಿತಿಯನ್ನು ವಿವರವಾಗಿ ನೀಡುವುದು ;

(ಇ) ಸದರಿ ಸಮಸ್ಯೆಗಳನ್ನು ಯಾವ ಕಾಲಮಿತಿಯಲ್ಲಿ ಪರಿಹರಿಸಲಾಗುವುದು ; ಈ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು) ಇ–ಸ್ವತ್ತು ೨.೦ ತಂತ್ರಾಂಶದ ಸಿಟಿಜನ್ ಇಂಟರ್‌ಫೇಸ್ ಮೂಲಕ ಅರ್ಜಿಗಳನ್ನು ಸಲ್ಲಿಸುವ ಸಂದರ್ಭದಲ್ಲಿ ಹಲವು ತಾಂತ್ರಿಕ ಸಮಸ್ಯೆಗಳು ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದರ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ಬಾಗಲಕೋಟೆ–ವಿಜಯಪುರ ಜಿಲ್ಲೆಯಲ್ಲಿನ ವಿವಿಧ ಪುನರ್ವಸತಿ ಕೇಂದ್ರಗಳಲ್ಲಿನ ಎಷ್ಟು ಆಸ್ತಿಗಳನ್ನು ಈಗಾಗಲೇ ಪಂಚತಂತ್ರ ೨.೦ ತಂತ್ರಾಂಶಗಳಲ್ಲಿ ಅಳವಡಿಸಿರುವ ಸಂಖ್ಯೆ ಎಷ್ಟು ; ನಮೂದಿಸಲು ಬಾಕಿ ಇರುವ ಆಸ್ತಿಗಳ ಸಂಖ್ಯೆ ಎಷ್ಟು ; ಬಾಕಿ ಇರುವ ಆಸ್ತಿಗಳನ್ನು ಯಾವ ಕಾಲಮಿತಿಯಲ್ಲಿ ಪಂಚತಂತ್ರ ೨.೦ ತಂತ್ರಾಂಶದಲ್ಲಿ ಅಳವಡಿಸಲಾಗುವುದು ; ಪುನರ್ವಸತಿ ಕೇಂದ್ರ, ತಾಲ್ಲೂಕು ಮತ್ತು ಜಿಲ್ಲೆಯ ಅನುಗುಣವಾಗಿ ಪ್ರತ್ಯೇಕವಾಗಿ ಮಾಹಿತಿ ನೀಡುವುದು ?

# ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್‌ಗಳಲ್ಲಿನ ಹುದ್ದೆಗಳ ಬಗ್ಗೆ

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೨೫೨ (೨೪೪೦) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳಿಗೆ ಮಂಜೂರಾದ ಹುದ್ದೆಗಳು ಯಾವುವು ಮತ್ತು ಎಷ್ಟು ; ಪ್ರಸ್ತುತ ಖಾಲಿ ಹುದ್ದೆಗಳು ಎಷ್ಟು ; ಮಂಜೂರಾದ ಒಟ್ಟು ಹುದ್ದೆಗಳ ಪೈಕಿ ಆಂತರಿಕ ಬಡ್ತಿಯ ಮೂಲಕ ಭರ್ತಿಗೊಳಿಸಬಹುದಾದ ಹುದ್ದೆಗಳು ಎಷ್ಟು ; ಅವುಗಳಲ್ಲಿ ಖಾಲಿಯಿರುವ ವಿವಿಧ ಹುದ್ದೆಗಳು ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ೨೦೨೩–೨೪ನೇ ಸಾಲಿನ ನಂತರ ನೇಮಕಾತಿಗೆ ಅಧಿಸೂಚನೆ ಹೊರಡಿಸಿದ ಹುದ್ದೆಗಳು ಯಾವುವು ಮತ್ತು ಎಷ್ಟು ; ಸದರಿ ನೇಮಕಾತಿ ಪ್ರಕ್ರಿಯೆ ಯಾವ ಹಂತದಲ್ಲಿದೆ ; ಯಾವ ಕಾಲಮಿತಿಯೊಳಗೆ ಸದರಿ ನೇಮಕಾತಿಯನ್ನು ಪೂರ್ಣಗೊಳಿಸಲಾಗುವುದು ;

(ಇ) ರಾಜ್ಯದ ಗ್ರಾಮ ಪಂಚಾಯತ್‌ಗಳಲ್ಲಿ ಇರುವ ಪಂಚಾಯತ್ ಸಿಬ್ಬಂದಿ ಹುದ್ದೆಗಳು ಎಷ್ಟು ; ಅವುಗಳ ಪೈಕಿ ಪ್ರಸ್ತುತ ಖಾಲಿಯಿರುವ ಒಟ್ಟು ಹುದ್ದೆಗಳು ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು) ೨೦೨೩–೨೪ನೇ ಸಾಲಿನ ನಂತರ ಇಲ್ಲಿಯವರೆಗೆ ಹೊಸದಾಗಿ ಭರ್ತಿಗೊಳಿಸಿದ ಪಂಚಾಯತ್ ಸಿಬ್ಬಂದಿ ಎಷ್ಟು ; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಈ) ಕಳೆದ ೩ ವರ್ಷಗಳಿಂದ ರಾಜ್ಯದಲ್ಲಿ ಒಂದೇ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ಜಿಲ್ಲಾವಾರು ವಿವರ ನೀಡುವುದು ;

(ಉ) ಅನ್ಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇಲಾಖಾ ಅಧಿಕಾರಿಗಳ ಸಂಖ್ಯೆ ಎಷ್ಟು ; ಅವರ ಮೂಲ ಹುದ್ದೆಗಳು ಯಾವುವು ; ಅವರು ಕರ್ತವ್ಯ ನಿರ್ವಹಿಸುತ್ತಿರುವ ವಿವಿಧ ಹುದ್ದೆಗಳು ಮತ್ತು ಅನ್ಯ ಇಲಾಖೆಗಳು ಯಾವುವು ;

(ಊ) ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅನ್ಯ ಇಲಾಖೆಯ ಅಧಿಕಾರಿಗಳ ಒಟ್ಟು ಸಂಖ್ಯೆ ಎಷ್ಟು ; ಮತ್ತು ಅವರು ಯಾವ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ; ಅವರ ಮೂಲ ಹುದ್ದೆ ಮತ್ತು ಇಲಾಖೆಗಳು ಯಾವುವು ?

## ಹಿಂದುಳಿದ ಪ್ರವರ್ಗ–೧ರ ವಿದ್ಯಾರ್ಥಿಗಳಿಗೆ ಶುಲ್ಕ ಪಾವತಿಯ ಬಗ್ಗೆ

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್.) (ಶಿಕ್ಷಕರ ಕ್ಷೇತ್ರ ) –**

೨೫೩ (೨೩೮೮) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೩–೨೪, ೨೦೨೪–೨೫ ಮತ್ತು ೨೦೨೫–೨೬ನೇ ಸಾಲಿನಲ್ಲಿ ಅತ್ಯಂತ ಹಿಂದುಳಿದ ಪ್ರವರ್ಗ–೧ರ ವಿದ್ಯಾರ್ಥಿಗಳಿಗೆ ಶುಲ್ಕ ಪಾವತಿ ಮತ್ತು ವೇತನಕ್ಕೆ ಬಿಡುಗಡೆಯಾದ ಅನುದಾನ ಎಷ್ಟು ;

(ಆ) ಸರ್ಕಾರವು ವಿವಿಧ ಶಾಲಾ ಕಾಲೇಜುಗಳಿಗೆ ನಿಗದಿಪಡಿಸಿದ ಶುಲ್ಕ ಮರು ಪಾವತಿ ಮಾಡಲು ಕಡಿಮೆ ಹಣವನ್ನು ನಿಗದಿಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಪ್ರವರ್ಗ–೧ರ ಹಿಂದುಳಿದ ಬಡ ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ ಮರುಪಾವತಿ ಮಾಡದಿದ್ದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಿಲ್ಲವೇ ; ಇದರಿಂದ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುವುದಿಲ್ಲವೇ ;

(ಈ) ಸರ್ಕಾರದ ಆದ್ಯತಾ ವಲಯದ ಶಿಕ್ಷಣದ ಅಡಿಯಲ್ಲಿ ಈ ರೀತಿಯಲ್ಲಿ ಶುಲ್ಕವನ್ನು ಮರುಪಾವತಿ ಮಾಡದೇ ಇದ್ದಲ್ಲಿ ಈ ಪ್ರವರ್ಗ–೧ರ ವಿದ್ಯಾರ್ಥಿಗಳು ಶಿಕ್ಷಣವನ್ನು ಮಧ್ಯದಲ್ಲಿಯೇ ಮೊಟಕುಗೊಳಿಸಿ, ನಿರುದ್ಯೋಗಿಗಳಾಗುವುದಿಲ್ಲವೇ ; ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

## ಬರಗಾಲಿನ ತಾಂತ್ರಿಕ ಸಹಾಯಕ (ಬಿ.ಎಫ್.ಟಿ.)ರನ್ನು ಗ್ರಾಮ ಪಂಚಾಯತಿ ನೌಕರರೆಂದು ಪರಿಗಣಿಸುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) –**

೨೫೪ (೨೪೧೧) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮನರೇಗಾ ಯೋಜನೆಯಡಿ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಬರಗಾಲಿನ ತಾಂತ್ರಿಕ ಸಹಾಯಕ (ಬಿ.ಎಫ್.ಟಿ.)ರಾಗಿ ಹಲವು ಜನರು ೧೦ ವರ್ಷಗಳಿಗೂ ಮೇಲ್ಪಟ್ಟು ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ನೌಕರರಿಗೆ ಕೇವಲ ೧೪,೫೦೦/–ಗಳ ಸಂಬಳ ಮಾತ್ರ ನೀಡುತ್ತಿದ್ದು, ಯಾವುದೇ ಸೇವಾ ಭದ್ರತೆಯಿಲ್ಲದೆ ಜೀವನ ನಡೆಸುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ ;

(ಇ) ಸದರಿ ನೌಕರರು ಮನರೇಗಾ ಯೋಜನೆಯಡಿ ವಾರ್ಷಿಕ ಕ್ರಿಯಾ ಯೋಜನೆ ರೂಪಿಸುವುದು ಹಾಗೂ ಗ್ರಾಮಗಳಲ್ಲಿ ಕೈಗೊಳ್ಳಬೇಕಿರುವ ಕೆಲಸಗಳನ್ನು ಗುರುತಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಇದ್ದಲ್ಲಿ, ಸದರಿ ನೌಕರರನ್ನು ಗ್ರಾಮ ಪಂಚಾಯತಿ ನೌಕರರೆಂದು ಪರಿಗಣಿಸಿ, ಅಗತ್ಯ ಸೇವಾ ಸೌಲಭ್ಯಗಳನ್ನು ನೀಡುವ ಕುರಿತು ಸರ್ಕಾರದ ನಿಲುವೇನು ?

## ಅಂಗವಿಕಲರಿಗೆ ತ್ರಿಚಕ್ರವಾಹನಗಳನ್ನು ನೀಡುವ ಕುರಿತು

**ಡಾ: ಯತೀಂದ್ರ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) –**

೨೫೫ (೨೩೭೭) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿರುವ ಅಂಗವಿಕಲರಿಗೆ ತ್ರಿಚಕ್ರವಾಹನಗಳು ಅತ್ಯಾವಶ್ಯಕವಾಗಿದ್ದು ಸರ್ಕಾರದ ವತಿಯಿಂದ ತ್ರಿಚಕ್ರವಾಹನಗಳನ್ನು ಪಡೆಯಲು ಸ್ವೀಕರಿಸಿದ ಅರ್ಜಿಗಳ ಸಂಖ್ಯೆಯೆಷ್ಟು ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಅಂಗವಿಕಲರಿಗೆ ತ್ರಿಚಕ್ರವಾಹನವನ್ನು ಸರ್ಕಾರದ ವತಿಯಿಂದ ವಿತರಿಸಲಾಗಿದೆ ? (ಜಿಲ್ಲಾವಾರು ಮಾಹಿತಿ ಒದಗಿಸುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು ಕಾ.ಸೂ. 853 /ಪಿ2

**List of Questions for Oral Answers**

**Total No. of Questions - 15**

# LIST - 17

# KARNATAKA LEGISLATIVE COUNCIL

## ONE HUNDRED AND FIFTY EIGHTH SESSION

## (Adjourned Meetings)

## Friday, the 27th March, 2026

---

**GROUP - V**

1. Minister for Social Welfare
2. Minister for Rural Development and Panchayat Raj and Information Technology and Bio-Technology
3. Minister for Agriculture
4. Minister for Labour
5. Minister for Backward Classes Welfare and Kannada and Culture
6. Minister for Planning and Statistics
7. Minister for Women and Child Development and Empowerment of Differently Abled and Senior Citizens

---

**ISSUANCE OF INTERNAL RESERVATION CASTE CERTIFICATES**

**Sri. F.H. Jakkappanavar (Nominated) -**

241 (2453) Will the Minister for Social Welfare be pleased to state :-

(a) since Government Order No. DPAR 01 Se Hi Ma 2026, Bengaluru dated: 27.02.2026 has been issued by the State Government to provide the reservation as per the

old reservation ratio 15+3 percent, whether the step would be initiated to withdraw the classification of Scheduled Caste certificates as A, B and C as per the direction of Circular No. S.W.D/08/ S.L.P/2024 (part-5) dated: 08.10.2025 ;

(b) if the circular dated: 08.10.2025 has been withdrawn, whether the step would be initiated to restore the previous caste certificate ;

(c) if there is no provision to restore the previous caste certificate, whether the direction would be issued through the order to all Taluk Tahsildars to provide the caste certificate by mentioning the original castes instead of providing caste certificates like A, B and C ;

(d) whether there is a provision for submission of new caste certificates during verification stage by the applicants who are submitting existing old caste certificates by them who are unable to get caste certificate immediately to submit the application for education and employment at present ; the step taken by the Government in this regard ?

## PROTEST BY ANGANWADI WORKERS

**Sri. Prathap Simha Nayak K. (Elected by Legislative Assembly) -**

**Sri. D.S. Arun (Local Authorities Constituency) -**

242 (2420+2404) Will the Minister for Women and Child Development and Empowerment of Differently Abled and Senior Citizens be pleased to state :-

(a) whether it has come to the notice of the Government that massive protest has been conducted by the Anganwadi workers recently urging to fulfil the various demands including increasing their monthly honorarium to Rs. 15,000/- ;

(b) if so, the number of Anganwadi workers and helpers who are working in the State at present ; the details of

the honorarium and all other facilities which are being provided to them at present ;

(c) the reasons for the Government has shown negligence from long time without initiating any action so far with regard to providing the gratuity amount as per the orders of the Supreme Court including significantly increasing monthly honorarium for Anganwadi workers and death cum retirement gratuity for retirement employees ;

(d) the timelimit within which the necessary step would be taken by the Government to provide the gratuity amount for retired employees as per the order of the Supreme Court alongwith significantly increasing honorarium of Anganwadi workers and helpers who have responsibilities of delivering the Government Schemes to the people at the grassroot level ?

## CONSTRUCTION OF HOSTELS IN SIRWAR TOWN OF RAICHUR DISTRICT

**Sri. Sharavana T.A. (Elected by Legislative Assembly) -**

243 (2329) Will the Minister for Backward Classes Welfare and Kannada and Culture be pleased to state :-

(a) the project in which the building work of Post-matric hostel is being takenup that has been sanctioned by the department in Sirwar town of Raichur district ; the estimation copy of the said work be furnished ;

(b) whether the said work is being carried out in the own land of the department or other places ; if it is being carried out in other place, whether the approval has been accorded by the owner/department of the site to taken up the work ; if so, the copy of the same be furnished ;

(c) if the construction is carried out within the premises of the Government composite Pre-university college, whether it will cause inconvenience for the students as there is no playground ; the reasons for carrying out

the work therein even though the public are opposing the work in the said place ;

(d) there are hundreds of C.A sites are available in the town to construct the hostel, the prevailing obstacles to construct therein ?

## CONSTRUCTION OF OWN BUILDINGS TO GRAM PANCHAYATS

**Sri. Sharanagouda Bayyapur (Local Authorities Constituency) -**

244 (2369) Will the Minister for Rural Development and Panchayat Raj and Information Technology and Bio- Technology be pleased to state :-

(a) whether it has come to the notice of the Government that some Gram Panchayats in the limits of Raichur and Koppal district do not have their own buildings ; if so, the step taken by the Government to construct the same ;

(b) whether it has come to the notice of the Government that there are vacant posts of Staff and Panchayat Development Officers in the said Gram Panchayats ; the steps taken by the Government to fill up the same ;

(c) since the term of the members of the said Gram Panchayats has been terminated, the step taken by the Government to conduct the elections for the next term ?

## INSTALLATION OF BANNERS IN ANGANWADIS

**Smt. Bharathi Shetty (Nominated) -**

245 (2370) Will the Minister for Women and Child Development and Empowerment of Differently Abled and Senior Citizens be pleased to state :-

(a) on the occasion of Golden Jubilee celebration the Integrated Child Development Scheme (ICDS) which is coming under the Women and Child Welfare

Department in the State has completed 50 years, whether the Government has decided to install the banners (nameboard) infront of all anganwadi centres across the State to publicize the objective and aims of the scheme ;

(b) if so, the yardsticks that have been complied under the Karnataka Transparency in Public Procurement (KTPP) while selecting the agency (firm) for the printing of the said banners ; (complete details be furnished) based on which and the procedure through which the work order has been issued for the selected agency ; whether the tender has been invited or whether the same has been exempted ; (details be furnished)

(c) the total number of banners that have been printed across the State for this scheme and the details of per unit cost ; the total number of banners that have been printed and districtwise complete information of per unit cost with regard to the above work be furnished ; the order that has been issued to print for the number of banners and the amount that has provided for Zenkar Advertising Agency of Bengaluru city ; whether 4G exemption has been given ; (information be furnished)

(d) the date on which the payment of bill has been made for the printing of banners and the agency for which it has been made ; the information alongwith bill number, cheque number and bank details of payment be furnished ?

## VACANT POSTS OF PANCHAYAT DEVELOPMENT OFFICERS IN KODAGU DISTRICT

**Sri. Kushalappa M.P. (suja) (Local Authorities Constituency) -**

246 (1254) Will the Minister for Rural Development and Panchayat Raj and Information Technology and Bio-Technology be pleased to state :-

(a) the number of Gram Panchayats in Kodagu district ; the number of Panchayat Development Officers who are working at present ;

(b) the number of Panchayat Development Officers and Gram Panchayat Secretary posts which have been sanctioned and vacant in the department ; the timelimit within which the vacant posts would be filled up ; (details be furnished)

(c) the reasons for entrusting the responsibility of more than one panchayat to Panchayat Development Officers (PDOs) in several Gram Panchayats of the State including Kodagu district ;

(d) the number of Panchayat Development Officers (PDOs) who are managing the responsibility of more than one Gram Panchayat in Kodagu district ?

## REHABILITATION FOR TRANSGENDERS AND PREVENTION OF WOMEN AND CHILD BEGGING IN THE STATE

**Sri. Shivakumar K. (Nominated) -**

247 (2457) Will the Minister for Women and Child Development and Empowerment of Differently Abled and Senior Citizens be pleased to state :-

(a) the total number of transgenders in the State ; whether any specific measures have been takenup by the Government to prevent the social transformation is being occurred due to the transgenders are residing therein coming from other States ;

(b) the particulars of rehabilitation programmes that have been framed by the Government to prevent the transgenders from involving in begging and illegal activities ; the details of the incentive that is being provided for job opportunity and self employment of transgenders to lead a respectable life ; (complete details be furnished)

(c) whether it has come to the notice of the Government that the women are begging by using small children in public places ; the measures taken by the Government to control the same ; whether such women and children have been admitted to the beggar's relief centres ; whether separate relief centres are functioning for women in the State ;

(d) the total amount of beggars' cess that is being collected from public ; the amount that has been spent for the welfare of women, children and transgenders till date ; (yearwise information be furnished)

(e) the number of rehabilitation centres that are functioning in the State at present and the number of people who are getting benefit from these centres ? (the districtwise details of the number of centres and beneficiaries be furnished)

## MINIMUM WAGES AND ARREARS FOR GRAM PANCHAYAT LIBRARIANS

**Sri. D.S. Arun (Local Authorities Constituency) -**

248 (2402) Will the Minister for Rural Development and Panchayat Raj and Information Technology and Bio-Technology be pleased to state :-

(a) the total number of librarians who are working in the village libraries which are coming under the Gram Panchayats in the State at present ; (districtwise details be furnished)

(b) whether it has come to the notice of the Government that the complaints have been received that the minimum wage that has been prescribed as per the notification issued by the State Government are not being paid to librarians who are working in Grama panchayat libraries ; if so, the details of the measures taken by the Government in this regard and the steps taken to pay the arrears be furnished ;

(c) whether regularizing or making permanent appointment of the services of librarians who are working in Gram Panchayat libraries under the consideration of the Government ; if so, the details of the same and the steps that has been taken by the Government ; (information be furnished)

(d) whether the administrative lapses, delay in releasing of grant or classification related issues have reasoned for the reduction in the fixed payment for the librarians who are working in the limit of Gram Panchayat libraries ; if so, the complete details in this regard be furnished ;

(e) whether any clear guidelines or amendment orders have been issued by the Government for concerned Gram Panchayats as not causing such payment issues in this manner ; if so, the details of the same be furnished ;

(f) the date on which the arrears would be paid to the librarians of Gram Panchayat libraries ; (details be furnished)

(g) whether the Government has intended to formulate any clear guidelines or monitoring system for the concerned Gram Panchayats as not causing disparity of such payment and arrears issues in future ? (if so, the details thereof be furnished)

## BUDGET AND ADMINISTRATION OF WOMEN AND CHILD WELFARE DEPARTMENT

**Sri. K. Abdul Jabbar (Elected by Legislative Assembly) -**

249 (2408) Will the Minister for Women and Child Development and Empowerment of Differently Abled and Senior Citizens be pleased to state:-

(a) the details of the annual budget of Women and Child Welfare Department ; the details of the current budget that has been increase/decrease compare to the last year ;

(b) the number of posts of anganwadi workers and helpers which are lying vacant ; the steps taken by the Government to fill up the same ;

(c) whether the digital system has been implemented for the monitoring of the schemes ; if so, the information be furnished ;

(d) the details of loans and subsidy which is being provided to women self help groups ;

(e) the particulars of training programmes which are being provided to women for their employment opportunities ?

**RECRUITMENT OF GRAM PANCHAYAT EMPLOYEES**

**Sri. Chidanand M. Gowda (Graduates' Constituency) -**

250 (2432) Will the Minister for Rural Development and Panchayat Raj and Information Technology and Bio-Technology be pleased to state :-

(a) the number of Gram Panchayat employees who have retired and promoted in Gram Panchayats of the State during the last 3 years ; (districtwise and yearwise details be furnished)

(b) the number of Gram Panchayat employees who have been recruited during the last 3 years ; (districtwise and yearwise details be furnished)

(c) the number of Gram Panchayat employees posts which are lying vacant at present ; (districtwise details be furnished)

(d) whether it has come to the notice of the Government that Gram Panchayat employees posts have not been recruited from several years ; if so, the reasons for not recruiting the same ;

(e) whether it has come to the notice of the Government that the public are not getting the services ontime due to the vacant posts of Gram Panchayat employees ; if so, the step that would be taken by the Government

to recruit the same ; the timelimit within which the recruitment would be conducted ?

**INSTALLATION OF ASSET RECORDS OF FARMERS AND PUBLIC IN TRANPARENCY AND DIGITAL FORM**

**Sri. P.H. Pujar (Local Authorities Constituency) -**

**Sri. Chidanand M. Gowda (Graduates' Constituency) -**

**Sri. Shashil G. Namoshi (Teachers' Constituency) -**

251 (2351+2433+2398) Will the Minister for Rural Development and Panchayat Raj and Information Technology and Bio-Technology be pleased to state :-

(a) the Government has ordered that E-Swathu 2.0 software has been implemented from 01.12.2025 as per the order dated 29.11.2025 to obtain their assets documents in transparency and digital form and with the intension of security of assets and protection of property of public of rural region of the State from 2024 till date, whether it has come to the notice of Government about the situation where farmers of the rural region are struggling without availability of E-Swathu document to get the loan from the bank and transfer their assets ; if so, the measures taken by the Government in this regard ;

(b) the number of applications that have been received from public to get the documents under E-swathu 2.0 software in the rural region of the State till date ; the number of applications that have been disposed ; the number of applications that have been pending for approval in the Gram Panchayat Secretary, Panchayat Development Officer, President of Gram Panchayat/Administrative Officer of Gram Panchayat and Executive Officers of the Taluk Panchayat login ; (districtwise detailed information be furnished)

(c) the timelimit within which the said problems would be resolved ; the measures taken by the Government to

resolve these problems ; (details be furnished) whether it has come to the notice of the Government that various technical issue are being caused during the submission of application through the citizen interface of E-swathu 2.0 software ; if so, the measures taken by the Government to resolve the same ;

(d) out of the assets in the various rehabilitation centers in Bagalkot and Vijayapura districts ; the number of assets that have been already installed in Panchatantra 2.0 software ; the timilimit within which the pending assets would be installed in Panchatantra 2.0 software ; the separate information according to the rehabilitation centre, taluk and district be furnished ?

## POSTS IN GRAM PANCHAYAT, TALUK PANCHAYAT AND ZILLA PANCHAYATS

**Sri. Kishor Kumar Puttur (Local Authorities Constituency) -**

252 (2440) Will the Minister for Rural Development and Panchayat Raj and Information Technology and Bio-Technology be pleased to state :-

(a) the particulars of number of posts that have been sanctioned for Gram Panchayat, Taluk Panchayat and Zilla Panchayats in the State ; the number of posts which are lying vacant at present ; out of the total sanctioned posts, the number of posts that would be filled up through internal promotion ; out of which, the number of various posts which are lying vacant ; (districtwise information be furnished)

(b) the number of particulars of posts for which the notification has been issued for recruitment after the year 2023-24 ; the present stage of the said recruitment process ; the timelimit within which the said recruitment would be completed ;

(c) the number of posts of panchayat staff in the Gram Panchayats of the State ; out of which, the total number

of posts which are lying vacant at present ; (districtwise information be furnished) the number of new panchayat staff which have been filled up from the year 2023-24 till date ; (districtwise complete information be furnished)

(d) the districtwise details of taluk panchayat executive officers who are working in the same place in the State during the last 3 years be furnished ;

(e) the number of department officers who are working in other department ; the particulars of their original designations ; the particulars of various posts and other departments in which they are working ;

(f) the total number of officers of other departments who are working in the department ; and the particulars of posts in which they are working ; the original post and the particulars of department for the same ?

**FEE PAYMENT FOR STUDENTS OF CATEGORY-1**

**Sri. D.T. Srinivas (D.T.S) (Teachers' Constituency) -**

253 (2388) Will the Minister for Social Welfare be pleased to state :-

(a) the details of the grant that has been released for reimbursement and scholarship for the students of category-1 of most backward classes during the year 2023-24, 2024-25 and 2025-26 ;

(b) whether it has come to the notice of the Government that lowest amount has been fixed by the Government for reimbursement of the prescribed fee for various schools and colleges than actual required ;

(c) if the full fee has not been reimbursed, whether it would be cause hardship for the poor students of category-1 of backward classes ; whether the students are deprived from the education thereof ;

(d) if the fee is not reimbursed in this manner under the Government priority sectors in education, whether the

students of catefory-1 become unemployed by stopping of education in the middle ; the measures taken by the Government in this regard ?

## CONSIDERATION OF BARE FOOT TECHNICIANS (BFT) INTO GRAM PANCHAYAT EMPLOYEES

**Sri. Basanagouda Badarli (Elected by Legislative Assembly) -**

254 (2411) Will the Minister for Rural Development and Panchayat Raj and Information Technology and Bio-Technology be pleased to state :-

(a) whether it has come to the notice of the Government that several people are working as Bare Foot Technicians (BFT) on contract basis more than 10 years in all Gram Panchayats of the State under the MGNREGA scheme ;

(b) only Rs.18,500/- salary is being paid to the said employees, whether it has come to the notice of the Government that the said employees are leading their life without any job security ;

(c) whether the Government has aware that the said employees are playing a vital role in preparing the annual action plan under the MGNREGA (Mahatma Gandhi National Rural Employment Guarantee) scheme and identifying the works to be undertaken in the villages ;

(d) if so, the stand of the Government with regard to providing required service facilities to them by considering the said employees as Gram Panchayat employees ?

## DISTRIBUTION OF TRICYCLES FOR DIFFERENTLY ABLED PERSONS

**Dr. Yathindra S. (Elected by Legislative Assembly) -**

255 (2377) Will the Minister for Women and Child Development and Empowerment of Differently Abled and Senior Citizens be pleased to state :-

(a) the tricycles are very essential for differently abled persons in the State from the last 3 years, the number of applications that have been submitted to obtain the tricycles by the Government ; (districtwise information be furnished)

(b) the number of differently abled persons to whom the tricycles have been distributed by the Government during the last 3 years ? (districtwise information be furnished)

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, - P2